ಆತ ನಲವತ್ತರ ಮಧ್ಯವಯಸ್ಕ. ಅತಿಯಾದ ಸಂಶಯ ಪತ್ನಿಯ ಮೇಲೆ. ಬೇರೆಯವರಿಗೆಲ್ಲಾ ಆತ ಒಳ್ಳೆಯವನೆ. ಆತನಿಗಿರುವುದು 'ಭ್ರಮೆಯ ಕಾಯಿಲೆ' ಎಂದು ವೈದ್ಯರು ಹೇಳುತ್ತಾರೆ. ಆದರೆ ಆತ ಚಿಕಿತ್ಸೆಗೆ ಬರಲು ಸುತಾರಾಂ ಒಪ್ಪುವುದಿಲ್ಲ. ಹೇಗೆ ಆತನಿಗೆ ಚಿಕಿತ್ಸೆ ಕೊಡಿಸುವುದು? ವೈದ್ಯರ ಬಳಿ ಕೇಳಿದರೆ 'ಕಾನೂನಿನ ಸಹಾಯ ಪಡೆದುಕೊಳ್ಳಿ' ಎನ್ನುತ್ತಾರೆ. ಕಾನೂನಿನ ಸಹಾಯ ಪಡೆಯುವುದು ಹೇಗೆ?

ಇಂತಹ ಬಹಳಷ್ಟು ಸಂದರ್ಭಗಳು ಕಾನೂನು ಮತ್ತು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಎದುರಾಗುತ್ತವೆ. ವಿಶ್ವದಾದ್ಯಂತ 45 ಕೋಟಿ ಜನ ಮಾನಸಿಕ ಕಾಯಿಲೆಗಳಿಂದ ನರಳುತ್ತಿದ್ದಾರೆ. ಇದಕ್ಕೆ ಜಗತ್ತಿನ ಯಾವ ಭಾಗವೂ ಹೊರತಾಗಿಲ್ಲ. ಆದರೂ ಅಭಿವೃದ್ಧಿಯಲ್ಲಿ ಹಿಂದುಳಿದ ರಾಷ್ಟ್ರಗಳಲ್ಲಿ ಮಾನಸಿಕ ಕಾಯಿಲೆಗಳು ಉಂಟಾದಾಗ ಅದಕ್ಕೆ ಸಿಕ್ಕುವ ಆರೈಕೆಯ ಪ್ರಮಾಣ ಕಡಿಮೆ. ಈ ಆರೈಕೆಯಲ್ಲಿಯೂ, ಹಲವು ವಿಧದ ಅಡ್ಡಿ ಆತಂಕಗಳು ಎದುರಾಗುತ್ತವೆ.

'ಎಲ್ಲ ಮನುಷ್ಯರೂ ಸ್ವತಂತ್ರರು, ಅವರಿಗೆ ಸಮಾನ ಗೌರವ ಮತ್ತು ಹಕ್ಕುಗಳನ್ನು ನೀಡಬೇಕು' (**All human beings are born free and equal in dignity and rights**) ಎಂದು **universal declaration of human rights**, ಅಂದರೆ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ ಹೇಳುತ್ತದೆ. ಆದರೆ ಬಹಳ ಸಂದರ್ಭಗಳಲ್ಲಿ ಮಾನಸಿಕ ಕಾಯಿಲೆಗಳ ರೋಗಿಗಳು ಚಿಕಿತ್ಸೆಗೇ ಒಳಪಡುವುದಿಲ್ಲ. ಅವಹೇಳನಕ್ಕೆ, ಶೋಷಣೆಗೆ ಒಳಗಾಗುತ್ತಾರೆ. ಕೆಲವರಿಗೆ ಮೂಲಭೂತ ಮಾನವ ಅಗತ್ಯ, ಹಕ್ಕು ಎರಡೂ ಆದ ಆಶ್ರಯ– ಆಹಾರ– ಉಡುಗೆ ಇವೂ ಸಿಕ್ಕುವುದಿಲ್ಲ.

ಚಿಕಿತ್ಸೆ ಪಡೆಯುತ್ತಿರುವವರಿಗೂ ಅಷ್ಟೇ, ಆರೋಗ್ಯವಾಗಿಯೇ ಇದ್ದರೂ ಅವರ ಉದ್ಯೋಗ ವಿದ್ಯಾಭ್ಯಾಸ– ವೈವಾಹಿಕ ಜೀವನಗಳು 'ಮನೋರೋಗಿ' ಎಂಬ ಹಣೆಪಟ್ಟಿಯಿಂದ ಸುಗಮವಾಗಿ ಸಾಗುವುದಿಲ್ಲ. ಅಂದರೆ ಮಾನಸಿಕ ಕಾಯಿಲೆಯಿಂದ ಗುಣಮುಖರಾಗಲು ಚಿಕಿತ್ಸೆಯ ಲಭ್ಯತೆ ಇದ್ದರೂ, ಅದರಿಂದ ವಂಚಿತರಾದವರು ಹಲವರಾದರೆ, ಇನ್ನು ಬಹಳಷ್ಟು ಜನ ಚಿಕಿತ್ಸೆ ಪಡೆದು ಗುಣಮುಖರಾದರೂ ಎಲ್ಲರಂತೆ ಜೀವನ ನಡೆಸುವ ಅವಕಾಶಗಳನ್ನು ಪಡೆಯಲು ವಿಫಲರಾಗುತ್ತಾರೆ. ಇವೆಲ್ಲದರ ಹಿನ್ನೆಲೆಯಲ್ಲಿಯೇ ಮಾನಸಿಕ ಆರೋಗ್ಯಕ್ಕೂ ಒಂದು ಕಾನೂನಿನ ಅವಶ್ಯಕತೆಯನ್ನು ಸಮಾಜ ಮನಗಂಡಿದ್ದು.

ದೇಹದ ಬೇರೆಲ್ಲಾ ಭಾಗಗಳಿಗೆ ಸಂಬಂಧಿಸಿದ ಕಾಯಿಲೆಗಳಿಗೂ ಮಾನಸಿಕ ಕಾಯಿಲೆಗೂ ಒಂದು ಮುಖ್ಯ ವ್ಯತ್ಯಾಸವಿದೆ. ಅದೆಂದರೆ ಮಾನಸಿಕ ಕಾಯಿಲೆಗಳಿಗೆ ಸಂಬಂಧಿಸಿದ ಲಕ್ಷಣಗಳು 'ಸಹಜತೆ'ಗಿಂತ ತುಂಬಾ ಭಿನ್ನವಾಗಿ ಎದ್ದು ತೋರದಿರುವುದು. ಅಂದರೆ 'ಜ್ವರ' ಬಂದಿತೆಂದುಕೊಳ್ಳಿ. ಮೈ ಬಿಸಿಯಾಗುವುದು ನಮಗೆ ಯಾರೂ ಹೇಳದೆಯೂ ಗೊತ್ತಾಗುತ್ತದೆ, ತಕ್ಷಣ ವೈದ್ಯ ಬಳಿ ಓಡುವಂತೆ ಮಾಡುತ್ತದೆ. ಅದೇ ಖಿನ್ನತೆ? ಮನಸ್ಸಿಗೆ

## ಕಾನೂನು ಜಾರಿ ಹೇಗೆ?

ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ಕಾನೂನುಗಳಿವೆ. "Forensic Psychiatry" ಎಂಬ ಒಂದು ಶಾಖೆ ಇದರ ಬಗೆಗಿನ ಅಧ್ಯಯನಕ್ಕೆ ಮೀಸಲಾಗಿದೆ. ಅಪರಾಧಿಯೊಬ್ಬನಿಗೆ ಮಾನಸಿಕ ಅಸ್ವಸ್ಥತೆಯಿದ್ದರೆ ಆತನಿಗೆ ಶಿಕ್ಷೆ ವಿಧಿಸಬೇಕೆ ಅಥವಾ ಬೇಡವೆ, ಅಪ್ರಾಪ್ತ ವಯಸ್ಕನೊಬ್ಬ ಅಪರಾಧವೆಸಗಿದರೆ ಆತನಿಗೇನು ಮಾಡಬೇಕು, ಮಾನಸಿಕ ಅಸ್ವಸ್ಥನೊಬ್ಬ ಸಾರ್ವಜನಿಕವಾಗಿ ಓಡಾಡುತ್ತಿದ್ದರೆ, ಯಾರು ಆತನನ್ನು ಎಲ್ಲಿ ಸೇರಿಸಬೇಕು, ಆತನ ಆರೈಕೆ ಮಾಡುವವರು ಯಾರು?– ಇವೆಲ್ಲಾ ಈ ಕಾನೂನಿನ ಮೂಲಕ ನಿರ್ಧರಿಸಲ್ಪಡುತ್ತವೆ.

ಆದರೆ ಕಾನೂನುಗಳ ಬಗ್ಗೆ ಭಾರತೀಯರಲ್ಲಿ ಒಂದು ರೀತಿಯ ನಿರಾಶಾವಾದವಿದೆ. ನಮಗೆ 'ಪೊಲೀಸ್' ವ್ಯವಸ್ಥೆಯ ಬಗ್ಗೆ ನಂಬಿಕೆಯಿಲ್ಲ! ಮಕ್ಕಳು ಊಟ ಮಾಡದಿದ್ದರೆ ಪೊಲೀಸ್‌ಗೆ ಕೊಡ್ತೀನಿ ನೋಡು ಎಂದು ಹೆದರಿಸುತ್ತೇವೆ. ಅದೇ ಮಕ್ಕಳು ಕಾಣೆಯಾದರೆ ತತ್‌ಕ್ಷಣ ಪೊಲೀಸರಿಗೆ ಮಾಹಿತಿ ನೀಡುವುದಿಲ್ಲ! ಇದು ಎಲ್ಲಾ ಕಾನೂನುಗಳ ಬಗೆಗೂ ನಿಜವಾದರೂ, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಕಾನೂನುಗಳ ಬಗೆಗಂತೂ ಇದು ಬಲವಾಗಿಯೇ ಇದೆ.

1987ರ ಕಾನೂನಿನ ಪ್ರಕಾರ, ಯಾವುದೇ ವ್ಯಕ್ತಿಯನ್ನು 'ಹುಚ್ಚ' ಎನ್ನುವುದೇ ಅಪರಾಧ! ನಮ್ಮ ಮನೋರೋಗಿಗಳನ್ನು ಸಮಾಜ ಮತ್ತು ಕುಟುಂಬದವರು ಯಾವಾಗಲೂ ಅವಹೇಳನ ಮಾಡುವುದು 'ಹುಚ್ಚ' ಎಂದೇ. ಹೀಗೆ ದಿನನಿತ್ಯ 'ಅಪರಾಧ'ಗೈಯುವ ಜನ ಕಾನೂನಿನ ಹಿಡಿತಕ್ಕೆ ಸಿಕ್ಕುತ್ತಾರೆಯೇ? ಹಾಗಾಗಿ ಕಾನೂನು ಜಾರಿಯಾಗಲು ನಮ್ಮ ಮೂಲಭೂತ ಧೋರಣೆ ಬದಲಾಗಬೇಕು.

